ವಿಜಯವಾಣಿ 28/11/18

# ಕೌಶಲ ತರಬೇತಿ ಕಾರ್ಯಾಗಾರ

■ ವಿಜಯವಾಣಿ ಸುದ್ದಿಜಾಲ ಕಾರ್ಕಳ

ಸ್ಪರ್ಧಾ ಜಗತ್ತಿನಲ್ಲಿ ಉದ್ಯೋಕಾಂಕ್ಷಿಗಳು ಕಂಪನಿಗಳಲ್ಲಿ ತೀವ್ರತರ ಪೈಪೋಟಿ ಎದುರಿಸಿ ಉದ್ಯೋಗ ಪಡೆದುಕೊಳ್ಳಬೇಕಾದರೆ ಬಹುಮುಖ ಪ್ರತಿಭೆ ಹೊಂದಿರಬೇಕು ಎಂದು ಉಡುಪಿ ಡಾ.ಜಿ.ಶಂಕರ್ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನ ಸಹ ಪ್ರಾಧ್ಯಾಪಕ ಪ್ರೊ.ಕೃಷ್ಣ ಭಟ್ ಹೇಳಿದರು.

ಕಾರ್ಕಳ ಮಂಜುನಾಥ ಪೈ ಸ್ಮಾರಕ ಸರ್ಕಾರಿ ಪ್ರಥಮ ದರ್ಜೆ ಕಾಲೇಜಿನಲ್ಲಿ ಬೆಂಗಳೂರಿನ ಉನ್ನತಿ ಸಂಸ್ಥೆ ಪ್ರಾಯೋಜಿತ 30 ದಿನಗಳ ಕೌಶಲ ತರಬೇತಿ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದರು.

ಪ್ರಾಂಶುಪಾಲ ಪ್ರೊ.ಶ್ರೀವರ್ಮ ಅಜ್ರಿ ಎಂ. ಅಧ್ಯಕ್ಷತೆ ವಹಿಸಿದ್ದರು. ಪ್ರೊ.ಜ್ಯೋತಿ ಎಲ್. ಜನ್ನೆ ಹಾಗೂ ವಿದ್ಯಾಧರ ಹೆಗ್ಡೆ ಶುಭ ಹಾರೈಸಿದರು. ಸಂಪನ್ಮೂಲ ವ್ಯಕ್ತಿ ನವೀನ್ ನಾಯಕ್ ತರಬೇತಿಯಲ್ಲಿ ಜೀವನ ಮೌಲ್ಯಗಳು, ಸಂವಹನ ಪ್ರಕ್ರಿಯೆ, ಒತ್ತಡ ನಿರ್ವಹಣೆ ಹೀಗೆ ವಿವಿಧ ಬಗೆಯ ವ್ಯವಹಾರ ಹಾಗೂ ಜೀವನ ಕೌಶಲಗಳ ಬಗ್ಗೆ ತಿಳಿಸಿದರು. ಕಾರ್ಯಾಗಾರದ ಸಂಚಾಲಕ ಗಣೇಶ್ ಸ್ವಾಗತಿಸಿ, ಸ್ವಾತಿ ಮಲ್ಯ ವಂದಿಸಿದರು. ಪ್ರತೀಕ್ಷಾ ನಿರೂಪಿಸಿದರು.